# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1024(1038) |
| 02 | ಸದಸ್ಯರ ಹೆಸರು | : **ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)** |
| 03 | ಉತ್ತರಿಸಬೇಕಾದ ದಿನಾಂಕ | : **22.09.2022** |
| 04 | ಉತ್ತರಿಸುವ ಸಚಿವರು | : **ಮಾನ್ಯ ಗೃಹ ಸಚಿವರು** |

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ವಿವಿಧೆಡೆ ಅಕ್ರಮವಾಗಿ ನೆಲೆಸಿರುವ ವಲಸಿಗರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಒಟ್ಟು 621 ವಲಸಿಗರು ರಾಜ್ಯದ ವಿವಿಧೆಡೆ ಅಕ್ರಮವಾಗಿ ನೆಲೆಸಿರುತ್ತಾರೆ. (ಆಗಸ್ಟ್ 2022ರ ವರೆಗೆ) |

| ಕ್ರಸ | ಘಟಕ | ಅಕ್ರಮ ವಲಸಿಗರ ಸಂಖ್ಯೆ |
|---|---|---|
| 01 | ಬೆಂಗಳೂರು ನಗರ | 570 |
| 02 | ಮಂಗಳೂರು ನಗರ | 01 |
| 03 | ಮೈಸೂರು ನಗರ | 24 |
| 04 | ದಾವಣಗೆರೆ ಜಿಲ್ಲೆ | 01 |
| 05 | ಕೆ.ಜಿ.ಎಫ್ | 04 |
| 06 | ಕೊಡಗು ಜಿಲ್ಲೆ | 01 |
| 07 | ರಾಮನಗರ ಜಿಲ್ಲೆ | 11 |
| 08 | ಬೆಂಗಳೂರು ಜಿಲ್ಲೆ | 05 |
| 09 | ಚಿಕ್ಕಮಗಳೂರು | 04 |
| | **ಒಟ್ಟು** | **621** |

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಆ | ಎಷ್ಟು ಜನ ಅಕ್ರಮ ವಲಸಿಗರನ್ನು ಅವರ ಸ್ವದೇಶಕ್ಕೆ ಮರಳಿ ಕಳುಹಿಸಲಾಗಿದೆ? ಅಕ್ರಮ ವಲಸಿಗರು ರಾಜ್ಯದಲ್ಲಿ ನೆಲೆಯೂರಲು ಸಹಕರಿಸಿದ ವರನ್ನು ಗುರುತಿಸಲಾಗಿದೆಯೇ: | ಒಟ್ಟು 159 ಅಕ್ರಮ ವಲಸಿಗರನ್ನು ಸ್ವದೇಶಕ್ಕೆ ಮರಳಿ ಕಳುಹಿಸಲಾಗಿರುತ್ತದೆ. |

| ಕ್ರಸ | ಘಟಕ | ಸ್ವದೇಶಕ್ಕೆ ಕಳುಹಿಸಲಾದ ಅಕ್ರಮ ವಲಸಿಗರ ಸಂಖ್ಯೆ |
|---|---|---|
| 01 | ಬೆಂಗಳೂರು ನಗರ | 71 |
| 02 | ಬೆಳಗಾವಿ ನಗರ | 12 |
| 03 | ಮೈಸೂರು ನಗರ | 07 |
| 04 | ಬೆಂಗಳೂರು ಜಿಲ್ಲೆ | 19 |
| 05 | ದಾವಣಗೆರೆ ಜಿಲ್ಲೆ | 01 |
| 06 | ಕೆ.ಜಿ.ಎಫ್ ಜಿಲ್ಲೆ | 01 |
| 07 | ಕೊಡಗು ಜಿಲ್ಲೆ | 01 |
| 08 | ದಕ್ಷಿಣ ಕನ್ನಡ ಜಿಲ್ಲೆ | 14 |
| 09 | ವಿಜಯಪುರ ಜಿಲ್ಲೆ | 33 |
| | **ಒಟ್ಟು** | **159** |

ಅಕ್ರಮ ವಲಸಿಗರು ರಾಜ್ಯದಲ್ಲಿ ನೆಲೆಯೂರಲು ಸಹಕರಿಸಿದವರನ್ನು ಆಯಾ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಗುರುತಿಸಲಾಗಿರುತ್ತದೆ.

| | | |
|---|---|---|
| ಇ) | ಸಹಕರಿಸಲಾದ ವ್ಯಕ್ತಿಗಳ ವಿರುದ್ಧ ಸರ್ಕಾರ ಯಾವ ಯಾವ ಅಧಿನಿಯಮಗಳಲ್ಲಿ ಕ್ರಮ ತೆಗೆದುಕೊಂಡಿದೆ: | ಅಕ್ರಮವಾಗಿ ಇರಲು ಸಹಕರಿಸಲಾದ ವ್ಯಕ್ತಿಗಳ ವಿರುದ್ಧ ಐಪಿಸಿ, ಸಿಆರ್‌ಪಿಸಿ, ಫಾರಿನರ್ಸ್ ಆಕ್ಟ್ 1946, ಮತ್ತು ಐಟಿ ಆಕ್ಟ್‌ರ ಅಡಿಯಲ್ಲಿ ಒಟ್ಟು 5 ಪ್ರಕರಣಗಳು ದಾಖಲಾಗಿರುತ್ತದೆ.<br>1. ಬೆಂಗಳೂರು ನಗರದ ರಾಮಮೂರ್ತಿನಗರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 247/2021 ಕಲಂ 14(c) of The Foreigners Act ರೀತ್ಯಾ ಪ್ರಕರಣ ದಾಖಲಾಗಿದ್ದು, ಕಾನೂನು ಕ್ರಮಕೈಗೊಳ್ಳಲಾಗಿರುತ್ತದೆ.<br>2. ಬೆಂಗಳೂರು ನಗರದ ಬಾಣಸವಾಡಿ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 314/2022 ಕಲಂ 7(2) of The Foreigners Act, 176 IPC ರೀತ್ಯಾ ಪ್ರಕರಣ ದಾಖಲಾಗಿದ್ದು, ಕಾನೂನು ಕ್ರಮಕೈಗೊಳ್ಳಲಾಗಿರುತ್ತದೆ.<br>3. ಕೊಡಗು ಜಿಲ್ಲೆಯ ವಿರಾಜಪೇಟೆ ನಗರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 20/2017 ಕಲಂ 14 of The Foreigners Act 1946 & 114 IPC ರೀತ್ಯಾ ಪ್ರಕರಣ ದಾಖಲಾಗಿದ್ದು, ಆರೋಪಿಗೆ 2 ತಿಂಗಳು 8 ದಿನಗಳ ಸಾದಾ ಶಿಕ್ಷೆಯಾಗಿರುತ್ತದೆ.<br>4. ಬೆಳಗಾವಿ ನಗರದ ಮಾಳಮಾರುತಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 112/2017 ಕಲಂ 465, 471, 420 ಐಪಿಸಿ ಮತ್ತು ಕಲಂ 12(1)(ಬಿ) ಪಾಸ್‌ಪೋರ್ಟ್ ಕಾಯ್ದೆ-1967 ಮತ್ತು ಕಲಂ 14 ಎ(ಬಿ)ಫಾರಿನರ್ಸ್ ಅಮೆಂಡ್‌ಮೆಂಟ್ ಕಾಯ್ದೆ 2004 ರೀತ್ಯಾ ಪ್ರಕರಣ ದಾಖಲಾಗಿದ್ದು, ಕಾನೂನು ಕ್ರಮಕೈಗೊಳ್ಳಲಾಗಿರುತ್ತದೆ.<br>5. ಬೆಳಗಾವಿ ನಗರದ ಮಾಳಮಾರುತಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 114/2017 ಕಲಂ 12(1)(ಸಿ) ಪಾಸ್‌ಪೋರ್ಟ್ ಕಾಯ್ದೆ-1967 ಮತ್ತು ಕಲಂ 14ಎ(ಬಿ) ಫಾರಿನರ್ಸ್ ಅಮೆಂಡ್‌ಮೆಂಟ್ ಕಾಯ್ದೆ ಅಡಿ ಪ್ರಕರಣ ದಾಖಲಾಗಿದ್ದು, ಕಾನೂನು ಕ್ರಮಕೈಗೊಳ್ಳಲಾಗಿರುತ್ತದೆ. |
| ಈ) | ಅಕ್ರಮವಾಗಿ ನೆಲೆಸುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕಠಿಣ ಕ್ರಮಗಳೇನು? | ಅಕ್ರಮವಾಗಿ ನೆಲೆಸುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ.<br>1. ರಾಜ್ಯಾದ್ಯಂತ 2022ರ ಆಗಸ್ಟ್ ಅಂತ್ಯದ ವರೆಗೆ ಒಟ್ಟು 621 ಜನ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳ ಬಗ್ಗೆ ಎಫ್‌ಆರ್‌ಆರ್‌ಓ ರವರುಗಳಿಂದ ಮಾಹಿತಿ ಪಡೆದು ಸದರಿ ವಿದೇಶಿ ಪ್ರಜೆಗಳನ್ನು ಪತ್ತೆ ಮಾಡುವುದಕ್ಕಾಗಿ ಆಯಾ ನಗರ/ಜಿಲ್ಲೆಗಳ ಘಟಕಾಧಿಕಾರಿಗಳಿಗೆ ಮಾಹಿತಿಯನ್ನು ತಲುಪಿಸಿ ಅನದಿಕೃತವಾಗಿ/ಅವಧಿ ಮೀರಿ ವಾಸವಾಗಿರುವ ಅಕ್ರಮವಾಗಿ ನೆಲೆಸಿರುವವರನ್ನು ಪತ್ತೆಮಾಡಲು ಸ್ಪೆಷಲ್ ಟಾಸ್ಕ್ ಫೋರ್ಸ್‌ಗಳನ್ನು ರಚನೆ ಮಾಡಿದ್ದು, ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಘಟಕಾಧಿಕಾರಿಗಳಿಗೆ ಸೂಚಿಸಲಾಗುತ್ತಿದೆ.<br>2. ಅವಧಿ ಮೀರಿ ಅಕ್ರಮವಾಗಿ ನೆಲೆಸಿರುವ ಹಾಗೂ ಅವಧಿ ಮೀರಿ ವಾಸವಗಿರುವ ವಿದೇಶಿ ಪ್ರಜೆಗಳು ಪತ್ತೆಯಾದಲ್ಲಿ ಅಂತಹವರನ್ನು ವಿದೇಶಿ ಮಂತ್ರಾಲಯದ ಮೂಲಕ ಆಯಾ ದೇಶಗಳಿಗೆ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯ [ಎಂಹೆಚ್‌ಎ]ಕ್ಕೆ |

ಮಾಹಿತಿಯನ್ನು ನೀಡಲಾಗುತ್ತಿದೆ ಹಾಗೂ ಪ್ರಕರಣ ದಾಖಲಿಸಲಾದ ವಿದೇಶಿ ಪ್ರಜೆಗಳ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥವಾಗುವವರೆಗೂ ಸಂಬಂಧಪಟ್ಟ ಇಲಾಖೆಯಿಂದ ನಿರ್ಗಮನ ಪರವಾನಗಿಯನ್ನು [Exit Permit] ಪಡೆಯುವವರೆಗೆ ಸದರಿಯವರನ್ನು Foreigners Detention Centre ನಲ್ಲಿ ಇರಿಸಿ, ಪ್ರಕರಣ ಇತ್ಯರ್ಥವಾದ ನಂತರ ಸದರಿ ವಿದೇಶಿ ಪ್ರಜೆಗಳ ಮೇಲೆ ಗಡಿಪಾರು ಮಾಡುವ ನಿಯಮವನ್ನು ಪಾಲಿಸಲಾಗುತ್ತಿದೆ. ಇದನ್ನು ಪ್ರತಿ ತಿಂಗಳು ಎಫ್‌ಆರ್‌ಆರ್‌ಓ ಬೆಂಗಳೂರು ಕಛೇರಿಯಿಂದ ಮಾಹಿತಿ ಪಡೆದು ನಗರದ ಮತ್ತು ಜಿಲ್ಲೆಯ ಎಲ್ಲಾ ಘಟಕಾಧಿಕಾರಿಗಳಿಗೆ ಸದರಿಯವರನ್ನು ಪತ್ತೆಮಾಡಿ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ನಿರ್ದೇಶನ ನೀಡಲಾಗುತ್ತಿದೆ.

3. ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳು ವಾಸಿಸಲು ಸಹಕಾರ ನೀಡುವವರ ವಿರುದ್ಧವೂ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ನಗರ ಮತ್ತು ಜಿಲ್ಲೆಯ ಘಟಕಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗುತ್ತಿದೆ.

4. ಹೆಚ್ಚು ವಿದೇಶಿ ಪ್ರಜೆಗಳು ವಾಸಿಸುವ ಸ್ಥಳಗಳಲ್ಲಿ ಅವರ ಮೇಲೆ ನಿಗಾವಹಿಸಲು ವಿಶೇಷ ಟಾಸ್ಕ್ ಫೋರ್ಸ್ ಅನ್ನು ರಚಿಸಲಾಗಿದೆ. ಹಾಗೂ ಈ ವಿಚಾರವಾಗಿ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಲು ಸಂಬಂಧಪಟ್ಟ ಘಟಕಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

5. ಅಕ್ರಮವಾಗಿ ವಾಸವಾಗಿರುವ ವಿದೇಶಿ ಪ್ರಜೆಗಳು ಕಂಡುಬಂದಲ್ಲಿ ಅಂತವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಮುಂದಿನ ಆದೇಶದವರೆಗೂ ಅವರುಗಳನ್ನು Foreigners Detention Centre ನಲ್ಲಿ ಇರಿಸಲಾಗುವುದು.

(ಯಾವುದೇ ವಿದೇಶಿ ಪ್ರಜೆ ಆ ದೇಶದ ರಹದಾರಿ ಪತ್ರ ಮತ್ತು ವೀಸಾ/ಟ್ರಾವೆಲ್ ಡಾಕ್ಯುಮೆಂಟ್ ಇಲ್ಲದೆಯೇ ಭಾರತ ದೇಶದಲ್ಲಿ ಪ್ರವೇಶಿಸುವುದು ಮತ್ತು ನೆಲೆಸುವುದು Section 12,13,14 of The Passport Act 1967 and Section 14 of The Foreigners Act 1946ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

ಮುಂದುವರೆದು ಇಂತಹವರನ್ನು ಗುರುತಿಸಿ, ಅವರನ್ನು ಆಯಾ ದೇಶಗಳ ರಾಯಭಾರಿ ಕಛೇರಿಗಳೊಂದಿಗೆ ಪತ್ರ ವ್ಯವಹಾರ ನಡೆಸಿ, ಅವರನ್ನು ಆಯಾ ದೇಶಗಳಿಗೆ ಗಡಿಪಾರು ಮಾಡಲು ಈಗಾಗಲೇ ನಿರ್ದಿಷ್ಟ ಕ್ರಮಗಳು ಚಾಲ್ತಿಯಲ್ಲಿರುತ್ತವೆ.

ಭಾರತ ಗೃಹ ಮಂತ್ರಾಲಯ, ವಿದೇಶಿಯರ ವಿಭಾಗ ಕಛೇರಿಯ ಪತ್ರ ಸಂಖ್ಯೆ: 25022/45/2019-F.I, ದಿನಾಂಕ: 01.07.2019ರ ಸುತ್ತೋಲೆಯಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರನ್ನು ಆಯಾ ಜಿಲ್ಲೆಗಳ ವಿದೇಶಿಯರ ನೋಂದಣಾಧಿಕಾರಿ (FRO) ರವರುಗಳು ಪ್ರಾದೇಶಿಕ

| | | |
|---|---|---|
| | | ವಿದೇಶಿಯರ ನೋಂದಣಾಧಿಕಾರಿ (FRRO), ಬೆಂಗಳೂರು ನಗರ ರವರ ಮುಖಾಂತರ ಹೇಗೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಅದರಂತೆ ಸರ್ಕಾರವು ಪ್ರತಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಮತ್ತು ಕಮೀಷನರೇಟ್ ವ್ಯಾಪ್ತಿಯಲ್ಲಿನ ಪೊಲೀಸ್ ಘಟಕಾಧಿಕಾರಿಗಳಿಗೆ ಸೂಚನೆ ನೀಡಿ, ಠಾಣಾವಾರು ಅಕ್ರಮವಾಗಿ ನೆಲೆಸಿರುವ ವಿದೇಶಿಯರಾದ ಬಾಂಗ್ಲಾ ದೇಶಿ ಮತ್ತು ಇನ್ನಿತರರನ್ನು ಗುರುತಿಸಿ ಅವರ ವಿರುದ್ಧ Section 14 of The Foreigners Act, 1946, R/w section 11 of the Foreigners Order 1948 ಅಡಿಯಲ್ಲಿ ಪ್ರಕರಣ ದಾಖಲಿಸಿ, ಅವರನ್ನು ಗಡಿಪಾರು ಮಾಡುವ ಎಲ್ಲಾ ಕಾನೂನು ಪ್ರಕ್ರಿಯೆಗಳನ್ನು ಕೈಗೊಳ್ಳಲು ಹಾಗೂ ಅವರನ್ನು ಗಡಿಪಾರು ಮಾಡುವವರೆಗೆ ತಾತ್ಕಾಲಿಕವಾಗಿ ವಿದೇಶಿಯರ ನಿರ್ಬಂಧಿತ ಕೇಂದ್ರ (Foreigners Detention Centre) ದಲ್ಲಿ ಇರಿಸಲು section 2 of Foreigners Order 1948 ರಂತೆ ಸಿವಿಲ್ ಅಥಾರಿಟಿ (Civil Authority) ಯಿಂದ ನಿರ್ಬಂಧ ಆಜ್ಞೆಯನ್ನು ಹೊರಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು, ಈ ವಿದೇಶಿಯರು ರಾಷ್ಟ್ರೀಯತೆ ಖಚಿತಪಡಿಸಿಕೊಂಡ ನಂತರ ಸಂಬಂಧಪಟ್ಟ ರಾಯಭಾರಿ ಕಛೇರಿಗೆ ಎಂ.ಹೆಚ್.ಎ. ಮುಖಾಂತರ ಪತ್ರ ವ್ಯವಹಾರ ನಡೆಸಿ, ಅವರನ್ನು ಗಡಿಪಾರು ಮಾಡಲು ತಾತ್ಕಾಲಿಕ ಪ್ರಯಾಣ ದಾಖಲಾತಿಯನ್ನು ಪಡೆದು, ಗಡಿಪಾರು ಮಾಡಲಾಗುತ್ತಿದೆ.<br><br>ಇನ್ನು ಕೆಲವು ಪ್ರಕರಣಗಳಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರುಗಳು ಯಾವುದಾದರು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದು, ಪ್ರಕರಣ ದಾಖಲಾಗಿದ್ದಲ್ಲಿ ಅವರನ್ನು ಆಯಾ ಕಾರಾಗೃಹ/ ಎಫ್.ಡಿ.ಸಿಯಲ್ಲಿ ಇರಿಸಿ, ಪ್ರಕರಣ ಇತ್ಯರ್ಥಗೊಂಡ ನಂತರ Ministry of External Affairs ಮುಖಾಂತರ ಆಯಾ ದೇಶಗಳ ರಾಯಭಾರ ಕಛೇರಿಗಳಿಗೆ ಪತ್ರ ವ್ಯವಹಾರ ನಡೆಸಿ, section 14 of The Foreigners Act 1946, section 11 of Foreigners Order, 1948 ಅಡಿಯಲ್ಲಿ ಅವರನ್ನು ಗಡಿಪಾರು ಮಾಡುವ ಪ್ರಕ್ರಿಯೆಯನ್ನು ಮಾಡಲಾಗುತ್ತಿದೆ. |

ಸಂಖ್ಯೆ: ಒಇ 382 ಪಿಎಂಎಸ್ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು